ನೋಡಿದರು. ಅರ್ಧ ಗಂಟೆ ಲೇಟು. ತಲೆ ತಗ್ಗಿಸಿ 'ಸಾರಿ' ಅಂದು ತನ್ನ ಜಾಗದಲ್ಲಿ ಕೂತ. ಎಲ್ಲರೂ ಇವನಿಗೇ ಕಾಯುತ್ತಿದ್ದರೆನ್ನುವಂತೆ ಬಾಸ್ 'ಓಕೆ. ಲೆಟ್ಸ್ ಸ್ಟಾರ್ಟ್' ಎಂದ. 'ಸ್ಟಾರ್ಟ್' ಆಯಿತು. 'ಮುಗಿ'ಯುವಷ್ಟರಲ್ಲಿ ಅರ್ಧ ಸುಸ್ತಾಗಿಹೋಗಿದ್ದ. ಬೆಳಿಗ್ಗೆ ಎದ್ದು ಯಾರ ಮುಖ ನೋಡಿದೆನೋ ಅಂತ ನೆನಪಿಸಿಕೊಳ್ಳೋ ಪ್ರಯತ್ನ ಮಾಡಿ ಸೋತ.

ನಾಲ್ಕು ಗಂಟೆಯಾಯಿತು ತನ್ನ ಜಾಗಕ್ಕೆ ಹೋಗೋಕೆ. ಬೆನ್ನನ್ನು ಕುರ್ಚಿಗೆ ಒರಗಿಸಿ ಎರಡೂ ಕೈಗಳನ್ನು ಮೇಲೆತ್ತಿ ಇಡೀ ದೇಹವನ್ನು ಸೆಟೆದುಕೊಂಡ. ಆರಾಮಕ್ಕೆ ಕೂತು ಕಣ್ಮುಚ್ಚಿದ.

'ಶಶೀ' ಕರೆಗೆ ಕಣ್ಣು ಬಿಟ್ಟು ನೋಡಿದ. ಪಕ್ಕದಲ್ಲಿ ಅನೂ, ಅನುರಾಧ.

'ತುಂಬಾ ಸುಸ್ತಾದ ಹಾಗಿದೆ.'

'ಹೌದು ಅನೂ. ಇವತ್ತು ಯಾಕೋ ಚೆನ್ನಾಗಿಲ್ಲ. ಬೆಳಿಗ್ಗೆಯಿಂದಲೂ ಕಿರಿಕ್ಕೇ.'

'ಹೌದಾ? ಈಗೆಲ್ಲ ಸರಿಹೋಯ್ತಲ್ಲ. ಟೇಕಿಟೀಸೀ. ಬಾ ಹಾಗೇ ತಣ್ಣಗೆ ಹೊರಗೆ ಹೋಗಿ ಬಿಸಿಯಾಗಿ ಏನಾದರೂ ಕುಡಿದು ಬರೋಣ.'

'ವಂಡರ್‌ಫುಲ್. ನಡಿ.'

ಕಾಫಿ ಬಾರ್‌ನಲ್ಲಿ ಎದುರು ಬದುರು ಕೂತರು. ಅನೂನೇ ಕ್ಯಾಪುಚಿನೊಗೆ ಆರ್ಡರ್ ಮಾಡಿದಳು.

'ನಿಮ್ಮ ಬಾಸ್ ನಿನ್ನ ತಲೇಗೆ ಏನು ಕಟ್ಟಿದ?'

'ನೋಡನೂ. ಒಂದು ತಿಂಗಳಲ್ಲೂ ಆಗದೇ ಇರೋ ಪ್ರಾಜೆಕ್ಟನ್ನ ಹದಿನೈದು ದಿನದಲ್ಲಿ ಕಂಪ್ಲೀಟ್ ಮಾಡೋ ಹಾಗೆ ಕಮಿಟ್ ಮಾಡಿಸಿಕೊಂಡುಬಿಟ್ಟ...'

ಜೋರಾಗಿ ನಕ್ಕ ಅನು, 'ನಾವು ಪ್ರತಿ ದಿನ ಮಾಡ್ತಾ ಇರೋ ಪ್ರಾಜೆಕ್ಟ್‌ಗಳೂ ಇದೇ ಥರದ್ದು ತಾನೇ. ಹೊಸದೇನೂ ಅಲ್ಲವಲ್ಲ. ಇದೂ ಹಾಗೇ. ಹೇಗೋ ಆಗುತ್ತೆ ಬಿಡು. ನಾನು ನಿನಗೆ ಏನೇನು ಹೆಲ್ಪ್ ಮಾಡಬಹುದು ಹೇಳು. ಎಲ್ಲಾ ಮಾಡಿಕೊಡ್ತೀನಿ. ಯೂ ಡೋಂಟ್ ವರೀ' ಅಂದಳು. 'ನೀನು ಯಾವಾಗಲೂ ನನ್ನ ಜೊತೇಗೆ ಇರ್ತೀಯ ಅನೂ. ಥ್ಯಾಂಕ್ಸ್' ಅನ್ನುವಂತೆ ಅನುವನ್ನು ನೋಡುತ್ತಾ ತಲೆ ಆಡಿಸಿದ.

ಕ್ಯಾಪುಚಿನೊ ಬಂತು. ಮೌನದ ಮಧ್ಯೆ ಅದನ್ನು ಕುಡಿದು ಮುಗಿಸಿದರು. ಮಗ್ಗನ್ನು ಕೆಳಗಿಟ್ಟ ಶಶಿಧರ ಬ್ಯಾಸ್ಕೆಟ್‌ನಲ್ಲಿದ್ದ ಶುಗರ್ ಸ್ಯಾಚೆಗಳನ್ನು ಮೇಲೆತ್ತಿ ಕೆಳಕ್ಕೆ ಬಿಡುತ್ತಿದ್ದ. ಒಂದು ಸಲ ಅವನು ಹಾಗೆ ಬಿಟ್ಟದ್ದನ್ನು ಬ್ಯಾಸ್ಕೆಟ್‌ನೊಳಗೆ ಬೀಳುವ ಮುಂಚೆ ಹಿಡಿದಳು. ಶಶಿ ತಲೆ ಎತ್ತಿ ಅನುವನ್ನು ನೋಡಿದ. ಅವನ ಕೈಯನ್ನು ತನ್ನ ಕೈಯಲ್ಲಿ ಹಿಡಿದು ಅದರ ಮೇಲೆ ಇನ್ನೊಂದು ಕೈ ಇಟ್ಟು ಮೆಲ್ಲಗೆ ನೀವುತ್ತಾ, 'ಏನು ಯೋಚನೆ ಮಾಡ್ತಿದ್ದೀಯಾ ಶಶೀ?' ಕೇಳಿದಳು.

'ಏನಿಲ್ಲ ಅನೂ' ಅಂದ ಸೋತ ದನಿಯಲ್ಲಿ.

'ಶಶೀ, ನನಗ್ಗೊತ್ತು ನೀನು ಶೀಲಾ ಬಗ್ಗೇನೇ ಯೋಚನೆ ಮಾಡ್ತಿದ್ದೀಯಾಂತ. ಡೋಂಟ್ ವರಿ ಶಶಿ. ಎಲ್ಲಾ ಸರಿಹೋಗತ್ತೆ. ಏನು ಮಾಡೋಕಾಗತ್ತೆ? ಒಬ್ಬೊಬ್ಬರು ಒಂದೊಂದು ಸ್ವಭಾವದವರು. ಹ್ಯಾಗೋ ಅಡ್ಜಸ್ಟ್ ಮಾಡಿಕೊಂಡು ಹೋಗಲೇಬೇಕು. ದೇರೀಸ್ ನೋ ಅದರ್ ಗೋ' ಅಂದಳು.

'ಹೌದು' ಎನ್ನುವಂತೆ ಶಶಿ ತನ್ನ ಎಡಗೈಯನ್ನು ಅನುವಿನ ಕೈ ಮೇಲಿಟ್ಟ.

ಶಶಿ ಅವಳ ಕಣ್ಣಲ್ಲಿ ಕಣ್ಣಿಟ್ಟು ನೋಡಿದ. ಅವನ ಕಣ್ಣು ತೇವವಾಯಿತು.

ಅದೆಷ್ಟು ಹೊತ್ತು ಹಾಗೆ ಕುಳಿತಿದ್ದರೋ.